ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010
ದೂರವಾಣಿ:080-23407011-25 ಇ-ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಮನ್ವಯ:ಅ.ಜಾ:ಅ.ಪಂ:ಹಂಚಿಕೆ:ಕಾಲಾವಧಿ:ಮೀಸಲಾತಿ:2016/1929 ದಿನಾಂಕ 06-09-2016

## ಕಛೇರಿ ಆದೇಶ

ವಿಷಯ: ಕೆ.ಎಸ್.ಎಸ್.ಐ.ಡಿ.ಸಿ.ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡುವ ನಿವೇಶನ/ಮಳಿಗೆಗಳನ್ನು 03 ವರ್ಷಗಳ ಕಾಲಾವಧಿಯವರೆಗೆ ಮೀಸಲಿಡುವ ಬಗ್ಗೆ.

ಉಲ್ಲೇಖ:
1) ಕೆ.ಎಸ್.ಎಸ್.ಐ.ಡಿ.ಸಿ. ಹಂಚಿಕೆ ನಿಯಮಗಳು 2014.
2) ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಪ.ಜಾತಿ:ಪ.ಪಂ:ಹಂಚಿಕೆ ಕಾಲಾವಧಿ ಮೀಸಲಾತಿ:2012:3464 ದಿನಾಂಕ 19.12.2012
3) ಸರ್ಕಾರದ ಪತ್ರ ಸಂಖ್ಯೆ CI:155:CSC:2015 ದಿನಾಂಕ 25-04-2016
4) ದಿನಾಂಕ 17.08.2016ರ ನಿಗಮದ 341ನೇ ಆಡಳಿತ ಮಂಡಳಿ ಸಭೆಯ ನಿರ್ಣಯಗಳು.

---

ಪ್ರಸ್ತಾವನೆ:-

ಸರ್ಕಾರದಿಂದ ಹಾಗೂ ನಿಗಮದ ಮಂಡಳಿಯಿಂದ ಕಾಲಕಾಲಕ್ಕೆ ನೀಡಲ್ಪಡುವ ಮಾರ್ಗದರ್ಶನ ಹಾಗೂ ನಿರ್ದೇಶನಗಳ ಅನ್ವಯ, ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿನ ಖಾಲಿ ನಿವೇಶನಗಳು/ ಮಳಿಗೆಗಳು/ಗೋದಾಮುಗಳು/ಅಂಗಡಿಗಳು ಮತ್ತು ಫ್ಲ್ಯಾಟುಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಹಂಚಿಕೆ ಮೀಸಲಾತಿ ಕಾಲಾವಧಿಯನ್ನು ನಿಗದಿಪಡಿಸಿ ಉಲ್ಲೇಖ (2)ರಲ್ಲಿನ ಕಛೇರಿ ಆದೇಶದಲ್ಲಿ ಸ್ಪಷ್ಟ ರೂಪದ ನಿರ್ದೇಶನಗಳನ್ನು ನೀಡಲಾಗಿದೆ.

ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿನ ನಿರ್ದೇಶನಗಳನ್ವಯ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 14ನೇ ವಿಧಾನಸಭೆಯ ಮೊದಲನೇ ಅಧಿವೇಶನದ ವರದಿಯಲ್ಲಿ ಕಲ್ಯಾಣ ಸಮಿತಿಯ ಸದರಿ ಪ್ರವರ್ಗದವರಿಗೆ ನಿವೇಶನಗಳು/ಮಳಿಗೆಗಳ ಹಂಚಿಕೆ ಮೀಸಲಾತಿಗೆ ಸಂಬಂಧಪಟ್ಟಂತೆ ಮಾಡಿದ ಶಿಫಾರಸ್ಸುಗಳು ಹಾಗೂ ದಿನಾಂಕ 08.06.2015ರ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿಯ ನಿರ್ದೇಶನಗಳ ಬಗ್ಗೆ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಹಂಚಿಕೆ ಕಾಲಾವಧಿ ಮೀಸಲಾತಿ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ದಿನಾಂಕ 17.08.2016ರಂದು ಜರುಗಿದ ನಿಗಮದ 341ನೇ ಆಡಳಿತ ಮಂಡಳಿ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ಮಂಡಳಿಯು ಕಾರ್ಯಸೂಚಿಯಲ್ಲಿನ ಪ್ರಸ್ತಾವನೆಯನ್ನು ಸುದೀರ್ಘವಾಗಿ ಚರ್ಚಿಸಿ, ಇನ್ನು ಮುಂದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿವೇಶನ/ಮಳಿಗೆಗಳನ್ನು '03 ವರ್ಷಗಳ ಅವಧಿ'ಯವರೆಗೆ ಮೀಸಲಿಡಲು ನಿರ್ಣಯಿಸಿತು.

..2..

ಅದರಂತೆ ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಆ ದೇ ಶ**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಹಾಲಿ ಜಾರಿಯಲ್ಲಿರುವ ಮಳಿಗೆ / ನಿವೇಶನಗಳ ಹಂಚಿಕೆ ನಿಯಮಾವಳಿಗಳ ಅನ್ವಯ, ಇನ್ನು ಮುಂದೆ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ದಿಮೆದಾರರುಗಳಿಗೆ ಮೀಸಲಾತಿಯಂತೆ ಮೀಸಲಿಟ್ಟಿರುವ ಖಾಲಿ ಮಳಿಗೆ / ನಿವೇಶನಗಳ ಹಂಚಿಕೆ ಅವಧಿಯನ್ನು 03 ವರ್ಷಗಳ ಅವಧಿಗೆ ಮೀಸಲಿಡುವಂತೆ ಆದೇಶಿಸಲಾಗಿದೆ.

ಸದರಿ ಆದೇಶವು ತಕ್ಷಣದಿಂದ ಹಾಗೂ ಈ ಬಗ್ಗೆ ಮುಂದಿನ ಆದೇಶ ಹೊರಡಿಸುವವರೆವಿಗೂ ಜಾರಿಯಲ್ಲಿರುತ್ತದೆ.

ಅಂತೆಯೇ, ಈ ಹಿಂದೆ ನಿಗಮದಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ನಿವೇಶನಗಳ ಹಂಚಿಕೆ ಮೀಸಲಾತಿಯ ಕಾಲಾವಧಿ ಬಗ್ಗೆ ಹೊರಡಿಸಲ್ಪಟ್ಟಿರುವ ಉಲ್ಲೇಖ (2)ರಲ್ಲಿನ ದಿನಾಂಕ **19-12-2012**ರ ನಿಗಮದ ಕಚೇರಿ ಆದೇಶ ಸಂಖ್ಯೆ ಸಮನ್ವಯ:ಪ.ಜಾ:ಪ.ಪಂ:ಹಂಚಿಕೆ ಕಾಲಾವಧಿ: ಮೀಸಲಾತಿ:2012/3464 ಅನ್ನು ಹಿಂಪಡೆಯಲಾಗಿದೆ.

ಮೇಲೆ ಸೂಚಿಸಿರುವ ಆದೇಶವನ್ನು 'ಕಟ್ಟುನಿಟ್ಟಾಗಿ' ಹಾಗೂ 'ಕಡ್ಡಾಯ'ವಾಗಿ ಪಾಲಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಗೆ,

1) ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು ನಗರ/ಗ್ರಾಮಾಂತರ/ ಪೀಣ್ಯಾ/ತುಮಕೂರು/ಹರಿಹರ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಬಳ್ಳಾರಿ/ಮೈಸೂರು/ಶಿವಮೊಗ್ಗ/ಮಂಗಳೂರು ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2) ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1/ವ-2 / (ಆ.ಲೆ.ಪ), ಕರಾಸಕೈಅನಿನಿ, ಬೆಂಗಳೂರು/ ಹುಬ್ಬಳ್ಳಿ.
3) ವ್ಯವಸ್ಥಾಪಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಬೆಂಗಳೂರು/ವೀರಸಂದ್ರ/ ಹುಬ್ಬಳ್ಳಿ/ಕಲಬುರಗಿ.
4) ಸಹಾಯಕ ವ್ಯವಸ್ಥಾಪಕರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಕುಂಬಳಗೂಡು/ಪೀಣ್ಯಾ/ದಾವಣಗೆರೆ/ ಹಾಸನ/ರಾಯಚೂರು/ಬೀದರ್/ಗದಗ್/ಬಾಗಲಕೋಟೆ/ವಿಜಾಪುರ.
5) ವ್ಯವಸ್ಥಾಪಕರು(ಗಣಕಯಂತ್ರ),ಕರಾಸಕೈಅನಿನಿ, ಬೆಂಗಳೂರು, ನಿಗಮದ ವೈಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು(ಕೈವ&ಹ)/(ಆಡಳಿತ&ಭೂಸ್ವಾಧೀನ)/(ವಾಣಿಜ್ಯ),ಕರಾಸಕೈಅನಿನಿ, ಬೆಂಗಳೂರು
2) ಮುಖ್ಯ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು,
3) ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ), ಕರಾಸಕೈಅನಿನಿ, ಬೆಂಗಳೂರು.
4) ವ್ಯ.ನಿ.ರವರ ಆಪ್ತ ಕಾರ್ಯದರ್ಶಿಗಳು, ಕರಾಸಕೈಅನಿನಿ, ಬೆಂಗಳೂರು.